## ಕರ್ನಾಟಕ ಸರ್ಕಾರ ನಡವಳಿಗಳು

ವಿಷಯ : 2018-19ನೇ ಸಾಲಿನಲ್ಲಿ ನವ ರಾಷ್ಟ್ರೀಯ ಜೈವಾನಿಲ ಮತ್ತು ಸಾವಯವ ಗೊಬ್ಬರ ನಿರ್ವಹಣೆ ಕಾರ್ಯಕ್ರಮದಡಿ ಕೇಂದ್ರ ಸಹಾಯಧನ ಬಿಡುಗಡೆ ಕುರಿತು.

ಓದಲಾಗಿದೆ :

1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ 553/16/2017-ಬಯೋಗ್ಯಾಸ್, ದಿನಾಂಕ 30.05.2018.
2. ಸರ್ಕಾರದ ಪತ್ರ ಸಂಖ್ಯೆ ಗ್ರಾಅಪ 18 ಜೈಅಯೋ 2018, ದಿನಾಂಕ 08.06.2018.
3. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 5-40/2018-ಬಿಜಿ(ಜಿ) ದಿನಾಂಕ 30.08.2018.
4. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 5-40/2018-ಬಿಜಿ(ಎಸ್‌ಸಿ) ದಿನಾಂಕ 30.08.2018
5. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 5-40/2018-ಬಿಜಿ(ಎಸ್‌ಟಿ) ದಿನಾಂಕ 07.09.2018.

### ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದಂತೆ ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ, ನವ ದೆಹಲಿಯು **2018-19ನೇ** ಸಾಲಿಗೆ ಸಂಬಂಧಿಸಿದಂತೆ ನವ ರಾಷ್ಟ್ರೀಯ ಜೈವಾನಿಲ ಮತ್ತು ಸಾವಯವ ಗೊಬ್ಬರ ನಿರ್ವಹಣೆ(NNBOMP) ಕಾರ್ಯಕ್ರಮದಡಿ ರಾಜ್ಯಕ್ಕೆ **8900** ಜೈವಾನಿಲ ಸ್ಥಾವರಗಳ ಭೌತಿಕ ಗುರಿಯನ್ನು ನಿಗದಿಪಡಿಸಿದೆ.

ಮೇಲೆ (2)ರಲ್ಲಿ ಓದಲಾದಂತೆ ಕೇಂದ್ರ ಸರ್ಕಾರವು ರಾಜ್ಯಕ್ಕೆ ಹಂಚಿಕೆ ಮಾಡಿದ 8900 ಸ್ಥಾವರಗಳ ಭೌತಿಕ ಗುರಿಯನ್ನು ಜಿಲ್ಲೆಗಳಿಗೆ ಹಂಚಿಕೆ ಮಾಡಿದೆ.

ಕೇಂದ್ರ ಸರ್ಕಾರವು **2018-19ನೇ** ಸಾಲಿಗೆ ನವ ರಾಷ್ಟ್ರೀಯ ಜೈವಾನಿಲ ಮತ್ತು ಸಾವಯವ ಗೊಬ್ಬರ ನಿರ್ವಹಣೆ(NNBOMP) ಕಾರ್ಯಕ್ರಮದಡಿ ಮೇಲೆ ಓದಲಾದ (3) ರಿಂದ (5)ರ ಪತ್ರಗಳಲ್ಲಿ **ರೂ.534.00ಲಕ್ಷ** ಕೇಂದ್ರ ಸಹಾಯಧನವನ್ನು ಸಾಮಾನ್ಯ, SC&ST ವರ್ಗದಡಿ ಬಿಡುಗಡೆ ಮಾಡಿದೆ. ಈ ಅನುದಾನವನ್ನು ಈಗಾಗಲೇ ನಿಗದಿಪಡಿಸಿದ ಭೌತಿಕ ಗುರಿಯನ್ವಯ ಲಭ್ಯವಿರುವ ಅನುದಾನಕ್ಕೆ ಮಿತಿಗೊಳಿಸಿ ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/60/ಜೈಅಯೋ/2018 ಬೆಂಗಳೂರು, ದಿನಾಂಕ 12.10.2018**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ನವ ರಾಷ್ಟ್ರೀಯ ಜೈವಾನಿಲ ಮತ್ತು ಸಾವಯವ ಗೊಬ್ಬರ ನಿರ್ವಹಣೆ(NNBOMP) ಕಾರ್ಯಕ್ರಮದಡಿ **2018-19ನೇ** ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಸಂಬಂಧಿಸಿದಂತೆ ಕೇಂದ್ರ ಸಹಾಯಧನ **ರೂ.534.00ಲಕ್ಷ(ಐದು ನೂರ ಮೂವತ್ನಾಲ್ಕು ಲಕ್ಷ ರೂಪಾಯಿಗಳು ಮಾತ್ರ)** ಗಳನ್ನು ಇದರೊಂದಿಗೆ ಲಗತ್ತಿಸಿದ **ಅನುಬಂಧದಲ್ಲಿ** ಹಂಚಿಕೆ ಮಾಡಿದಂತೆ ಬಿಡುಗಡೆ ಮಾಡಿ ಆದೇಶಿಸಿದೆ.

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗುತ್ತಿದ್ದು, ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಮಾಡತಕ್ಕದಲ್ಲ.

ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಸದರಿ ಅನುದಾನವನ್ನು ಗಾಂಧಿ ಸಾಕ್ಷಿ ಕಾಯಕದಡಿ ಇಂಧೀಕರಿಸುವುದು ಹಾಗೂ PFMS ತಂತ್ರಾಂಶದಲ್ಲೇ ಬಿಡುಗಡೆ ಮಾಡಲು ಕ್ರಮವಹಿಸತಕ್ಕದ್ದು. ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ 2810-60-196-6-01ರಡಿ ವೆಚ್ಚ ಭರಿಸಿ, ನಿಗದಿತ ನಮೂನೆಯಲ್ಲಿ ಹಣಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ನೀಡುವುದು

ಈ ಆದೇಶವನ್ನು ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ: ಗ್ರಾಅಪ 328 ಪಿಬಿಎಸ್ 2018, ದಿನಾಂಕ 06.10.2018ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಎಲ್ಲಾ ಜಿಲ್ಲಾ ಪಂಚಾಯಿತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ / ಮುಖ್ಯ ಲೆಕ್ಕಾಧಿಕಾರಿಗಳು.
3. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು(ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 60 ಜೈಅಯೋ 2018,
ದಿನಾಂಕ 12.10.2018ರ ಅನುಬಂಧ

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆಯ ಹೆಸರು | ಬಿಡುಗಡೆಗೆ ಮಾಡಿದ ಕೇಂದ್ರ ಸಹಾಯಧನ | | | |
|---|---|---|---|---|---|
| | | Gen. | SC | ST | ಒಟ್ಟು |
| 1 | ಬಾಗಲಕೋಟೆ | 16.50 | 3.00 | 0.30 | 19.80 |
| 2 | ಬೆಂಗಳೂರು (ಗ್ರಾ) | 15.60 | 3.00 | 1.20 | 19.80 |
| 3 | ಬೆಂಗಳೂರು (ನ) | 8.88 | 0.60 | 0.12 | 9.60 |
| 4 | ಬೆಳಗಾಂ | 90.00 | 30.00 | 6.00 | 126.00 |
| 5 | ಬಳ್ಳಾರಿ | 4.38 | 0.30 | 0.12 | 4.80 |
| 6 | ಬೀದರ್ | 26.40 | 12.00 | 1.20 | 39.60 |
| 7 | ಚಾಮರಾಜನಗರ | 4.38 | 0.30 | 0.12 | 4.80 |
| 8 | ಚಿಕ್ಕಬಳ್ಳಾಪುರ | 15.00 | 3.00 | 1.80 | 19.80 |
| 9 | ಚಿಕ್ಕಮಗಳೂರು | 4.38 | 0.30 | 0.12 | 4.80 |
| 10 | ಚಿತ್ರದುರ್ಗ | 4.38 | 0.30 | 0.12 | 4.80 |
| 11 | ದಕ್ಷಿಣ ಕನ್ನಡ | 26.10 | 12.00 | 3.00 | 41.10 |
| 12 | ದಾವಣಗೆರೆ | 15.90 | 3.00 | 0.90 | 19.80 |
| 13 | ಧಾರವಾಡ | 4.38 | 0.30 | 0.12 | 4.80 |
| 14 | ಗದಗ | 4.38 | 0.30 | 0.12 | 4.80 |
| 15 | ಹಾಸನ | 8.70 | 0.60 | 0.30 | 9.60 |
| 16 | ಹಾವೇರಿ | 8.10 | 0.60 | 0.30 | 9.00 |
| 17 | ಕಲಬುರಗಿ | 24.90 | 4.20 | 3.00 | 32.10 |
| 18 | ಕೊಡಗು | 4.38 | 0.30 | 0.12 | 4.80 |
| 19 | ಕೋಲಾರ | 9.18 | 0.30 | 0.12 | 9.60 |
| 20 | ಕೊಪ್ಪಳ | 9.18 | 0.30 | 0.12 | 9.60 |
| 21 | ಮಂಡ್ಯ | 4.38 | 0.30 | 0.12 | 4.80 |
| 22 | ಮೈಸೂರು | 8.88 | 0.60 | 0.12 | 9.60 |
| 23 | ರಾಯಚೂರು | 5.58 | 0.30 | 0.12 | 6.00 |
| 24 | ರಾಮನಗರ | 4.38 | 0.30 | 0.12 | 4.80 |
| 25 | ಶಿವಮೊಗ್ಗ | 24.60 | 4.50 | 1.50 | 30.60 |
| 26 | ತುಮಕೂರು | 14.70 | 3.00 | 0.30 | 18.00 |
| 27 | ಉತ್ತರ ಕನ್ನಡ | 23.10 | 3.60 | 1.50 | 28.20 |
| 28 | ಉಡುಪಿ | 10.80 | 0.60 | 0.60 | 12.00 |
| 29 | ವಿಜಯಪುರ | 12.90 | 1.80 | 0.30 | 15.00 |
| 30 | ಯಾದಗಿರಿ | 5.58 | 0.30 | 0.12 | 6.00 |
| | ಒಟ್ಟು | **420.00** | **90.00** | **24.00** | **534.00** |

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ